# ವಿಧಾನಸೌಧದಿಂದ ಅಧಿಕಾರಿಗಳ ಕಚೇರಿ ಸ್ಥಳಾಂತರಿಸಿ: ಹೊರಟ್ಟಿ

## ವಿಧಾನಸೌಧ ಕೇವಲ ಶಾಸಕಾಂಗ ಕಚೇರಿಗಳಿಗೆ ಮೀಸಲು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿಧಾನಸೌಧದಲ್ಲಿರುವ ಕಾರ್ಯಾಂಗ ಕಚೇರಿಗಳನ್ನು ಪಕ್ಕದಲ್ಲಿರುವ ಬಹುಮಹಡಿ ಕಟ್ಟಡಕ್ಕೆ (ಎಂ.ಎಸ್. ಬಿಲ್ಡಿಂಗ್) ಸ್ಥಳಾಂತರ ಮಾಡಿ, ವಿಧಾನಸೌಧವನ್ನು ಶಾಸಕಾಂಗಕ್ಕೆ ಸಂಪೂರ್ಣವಾಗಿ ಮೀಸಲಿಡಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಆಗ್ರಹಿಸಿದ್ದಾರೆ.



ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ವಿಧಾನಸೌಧ ಕಟ್ಟಿರುವುದೇ ಶಾಸಕಾಂಗಕ್ಕೆ, ಹೀಗಾಗಿ ಶಾಸಕಾಂಗ ಮತ್ತು ಕಾರ್ಯಾಂಗವನ್ನು ಪ್ರತ್ಯೇಕಿಸಬೇಕು. ಕಾರ್ಯಾಂಗವನ್ನು ಎಂ.ಎಸ್.ಬಿಲ್ಡಿಂಗ್‌ಗೆ ಸ್ಥಳಾಂತರ ಮಾಡಬೇಕು ಎಂದು ಹೇಳಿದರು. ಹಿಮಾಚಲ ಪ್ರದೇಶ ರಾಜ್ಯದಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗ ಪ್ರತ್ಯೇಕವಾಗಿವೆ, ಆದರೆ ವಿಧಾನಸೌಧದಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗ ಒಟ್ಟಿಗೆ ಇವೆ. ಇವೆರಡನ್ನೂ ವಿಕೇಂದ್ರೀಕರಣ ಮಾಡಬೇಕು. ಸ್ಥಳಾವಕಾಶದ ಕೊರತೆಯಿಂದ ಸಮಿತಿಗಳ ಚಟುವಟಿಕೆ ನಡೆಸಲು ಕಷ್ಟವಾಗುತ್ತಿದೆ. ವಿಧಾನ ಪರಿಷತ್ ಸಚಿವಾಲಯಕ್ಕೆ ಕನಿಷ್ಠ ಐದು ಕೊಠಡಿಗಳು ಬೇಕಾಗಿವೆ. ಈ ಸಂಬಂಧ ಮುಖ್ಯ ಕಾರ್ಯದರ್ಶಿ ರವಿಕುಮಾರ್ ಅವರಿಗೆ ಪತ್ರ ಬರೆಯಲಾಗಿದೆ. ಕೊಠಡಿ ಕೊಡಿ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ನಾವು ಕೇಳಬೇಕಾಗಿದೆ ಎಂದರು.

# 6ನೇ ತರಗತಿಯಿಂದ ಶಾಲೆ ತೆರೆಯಿರಿ: ಹೊರಟ್ಟಿ ಆಗ್ರಹ

## ‘ತಜ್ಞರು 1ರಿಂದ 5 ಬಂದ್ ಮಾಡಲು ಹೇಳಿದ್ದಾರೆ’

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮೂರನೇ ಅಲೆಯಲ್ಲಿ ಕೋವಿಡ್ ಸೋಂಕು ಹರಡುವುದು ಜಾಸ್ತಿಯಾದರೂ ಗಂಭೀರತೆ ಕಡಿಮೆ ಎಂದು ತಜ್ಞರು ಅಭಿಪ್ರಾಯ ಪಟ್ಟಿರುವ ಹಿನ್ನೆಲೆಯಲ್ಲಿ 1ನೇ ತರಗತಿಯಿಂದ 5ನೇ ತರಗತಿವರೆಗೆ ಮಾತ್ರ ಶಾಲೆಗಳನ್ನು ಬಂದ್ ಮಾಡಿ, 6ನೇ ತರಗತಿಯಿಂದ ಶಾಲೆಗಳನ್ನು ಮಾರ್ಗಸೂಚಿಗಳ ಪಾಲನೆಯೊಂದಿಗೆ ನಡೆಸಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಆಗ್ರಹಿಸಿದ್ದಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಲೆಗಳನ್ನು ಬಂದ್ ಮಾಡಿದರೆ ಮಕ್ಕಳ ಕಲಿಕೆ ಮೇಲೆ ಪರಿಣಾಮ ಬೀರಲಿದೆ. ಕೋವಿಡ್ ಮೂರನೇ ಅಲೆ ಗಂಭೀರವಾಗಿಲ್ಲ, ಈ ಹಿನ್ನೆಲೆಯಲ್ಲಿ ಶಾಲೆಗಳಿಗೆ ಬಿಡುವು ನೀಡುವುದು ಬೇಡ, ಸಾಮಾಜಿಕ ಅಂತರ, ನಿಯಮಗಳನ್ನು ಪಾಲಿಸಿ ಶಾಲೆ ನಡೆಸುವುದು ಉತ್ತಮ. ಪೋಷಕರ ಆತಂಕವನ್ನು ದೂರ ಮಾಡಿ ಶಾಲೆಗಳನ್ನು ನಡೆಸಬೇಕು. ಶಾಲೆಗಳ ವಿಚಾರದಲ್ಲಿ ಸರ್ಕಾರ ಸ್ಪಷ್ಟ ನಿರ್ಧಾರ ಕೈಗೊಳ್ಳಬೇಕು. ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಡುವುದು ಸರಿಯಲ್ಲ ಎಂದರು.

ಕನ್ನಡಪ್ರಭ Sun, 16 January 2022
https://kpepaper.asianetnews.com/c/656